ಕರ್ನಾಟಕ ಸರ್ಕಾರ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
**ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ,**
ಶ್ರೀಮತಿ ಪ್ರೇಮಾಬಾಯಿ ಪ್ರೇಮಾನಂದ ರಾಯ್ಕರ್, ಎಮ್.ಜಿ.ರಸ್ತೆ. ರಿಲೈನ್ಸ್ ಕಂಪೌಂಡ್, ಕಾರವಾರ-581 301.
Email: dcpokarwar318@gmail.com Phone no: 08382-220182

ಕ್ರ.ಸಂ: ಜಿಮರಘ/ಕಾ/ಅ.ಪಾ.ವ/ಸ.ಕು/2020-21/760 ದಿನಾಂಕ: 28-01-2021.

ರಿಗೆ, **ನೆನಪೋಲೆ**

ಅಧ್ಯಕ್ಷರು,
ಬಾಲನ್ಯಾಯ ಮಂಡಳಿ,
ಮಕ್ಕಳ ಕಲ್ಯಾಣ ಸಮಿತಿ-01 & 02
ಉತ್ತರ ಕನ್ನಡ ಜಿಲ್ಲೆ

ಮಾನ್ಯರೇ,

ವಿಷಯ : W.P.No. 4/2020 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ದೇಶನಗಳಿಗೆ ಅನುಪಾಲನೆ ಸಲ್ಲಿಸುತ್ತಿರುವ ಕುರಿತು.

ಉಲ್ಲೇಖ :1. ಕೇಂದ್ರ ಕಛೇರಿಯ ಪತ್ರ ಸಂ: ಕೆಎಸ್‌ಐಸಿಪಿಎಸ್/ಮರ/ಸ.ನ್ಯಾ/125 2020-21 ದಿ:30-12-2020

2. ಈ ಕಛೇರಿಯ ಪತ್ರ ಸಂ: ಜಿಮರಘ/ಕಾ/ಅ.ಪಾ.ವ/ಸ.ಕು/2020-21/716 ದಿನಾಂಕ: 13-01-2021

******

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕೋವಿಡ್-19ರ ಹಿನ್ನಲೆಯಲ್ಲಿ W.P.No. 4/2020 ಗೆ ಸಂಬಂಧಿಸಿದಂತೆ ದಿ: 15-12-2020 ರಲ್ಲಿ ನೀಡಿದ ನಿರ್ದೇಶದನ್ವಯ ಬಾಲನ್ಯಾಯ ಮಂಡಳಿ ಮತ್ತು ಮಕ್ಕಳ ಕಲ್ಯಾಣ ಸಮಿತಿಗಳು ಮಕ್ಕಳ ಪಾಲನಾ ಸಂಸ್ಥೆಗಳಿಗೆ ಭೇಟಿ ನೀಡಿ ಅಲ್ಲಿ ಮಕ್ಕಳಿಗೆ ಒದಗಿಸಿರುವ ಮೂಲಭೂತ ಸೌಲಭ್ಯಗಳ ಹಾಗೂ ಶೈಕ್ಷಣಿಕ ಸಾಮಾಗ್ರಿಗಳ ಲಭ್ಯತೆಗಳ ಬಗ್ಗೆ ವರದಿಯನ್ನು ಸಿದ್ದಪಡಿಸಿ ಸಲ್ಲಿಸಲು ತಿಳಿಸಲಾಗಿದೆ.

ಉಲ್ಲೇಖ(2)ರ ಪತ್ರದನ್ವಯ W.P.No. 4/2020 ಗೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ಎಲ್ಲ ನಿರ್ದೇಶನಗಳಿಗೆ ಮಾನ್ಯ ಜಿಲ್ಲಾಧಿಕಾರಿಯವರು 15 ದಿನಗಳ ಒಳಗಾಗಿ ಅನುಪಾಲನೆಯನ್ನು ಸಲ್ಲಿಸಬೇಕೆಂದು ತಿಳಿಸಲಾಗಿದ್ದು, ಸದರಿ ಅನುಪಾಲನೆಗೆ ಮಕ್ಕಳ ಕಲ್ಯಾಣ ಸಮಿತಿಯು ಮಕ್ಕಳ ಪಾಲನಾ ಸಂಸ್ಥೆಗಳಿಗೆ ಭೇಟಿ ನೀಡಿ ಪರಿಶೀಲನೆ ವರದಿಯೂ ಸಲ್ಲಿಸುವುದು ಅತೀ ತುರ್ತಾಗಿರುವುದರಿಂದ ದಿ: 28-01-2021 ರೊಳಗೆ ಈ ಕಛೇರಿಗೆ ಮಾಹಿತಿ ಕಳುಹಿಸಿಕೊಡುಲು ತಿಳಿಸಿದಾಗಿಯೂ ಕೂಡ ಇದೂವರೆಗೂ ಯಾವುದೇ ಮಾಹಿತಿ ಈ ಕಛೇರಿಗೆ ಸಲ್ಲಿಸಿರುವುದಿಲ್ಲ. ಆದ್ದರಿಂದ ಕೂಡಲೇ ಈ ಮಾಹಿತಿಯನ್ನು ದಿನಾಂಕ:11-02-2021 ರೊಳಗಾಗಿ ಈ ಕಛೇರಿಗೆ ಸಲ್ಲಿಸಲು ಈ ಮೂಲಕ ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಉತ್ತರ ಕನ್ನಡ, ಕಾರವಾರ.

ಪ್ರತಿಯನ್ನು:

1) ಮಾನ್ಯ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರುರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
2) ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಉತ್ತರ ಕನ್ನಡ ಕಾರವಾರ ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
3) ಮಾನ್ಯ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಾರವಾರ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.

Scanned with CamScanner